ಓಎಸ್‌ನಂ.206/2021

ಡಿ ಡಬ್ಲ್ಯೂ- **1**

<u>ದಿನಾಂಕಃ **22-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ** ವಾದಿ ಪರ ಶ್ರೀ ಬಿಎನ್ ಕೆ **ವಕೀಲರಿಂದ**</u>

ಪ್ರಸುತ್ತ ದಾವೆಯಲ್ಲಿ ನಿಮಗೆ ನ್ಯಾಯಾಲದಿಂದ ಸಮನ್ಸ್ ಜಾರಿಯಾಗಿದ್ದು, ನೀವು ಯಾವುದೇ ತಕರಾರು ಮಾಡದೇ ಅದನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರಾಗಿರುತ್ತಿರಾ ಎಂದರೆ ಸರಿಯಲ್ಲ. ಓ ಎಸ್ 74/2014 ದಾವೆಯಲ್ಲೂ ಸಹ ನನಗೆ ಸಮನ್ಸ್ ಜಾರಿಯಾಗಿದ್ದ, ನಾನು ಮನೆಯಲ್ಲಿ ಇಲ್ಲದ ಕಾರಣ ಮನೆಯಲ್ಲಿ ಕೊಟ್ಟು ಹೋಗಿರುತ್ತಾರೆಂದು ನುಡಿದಿರುತ್ತಾರೆ. ಸಮನ್ಸ್ ನಿಮಗೆ ಸಂಬಂಧಪಟ್ಟಿರುವುದಲ್ಲ ಎಂದು ತಿಳಿದಿದ್ದರೂ ನೀವು ನ್ಯಾಯಾಲಯಕ್ಕೆ ಹಾಜರಾಗಿರುತ್ತಿರಾ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ, ನನಗೆ ಬಂದಿದೆ ಎಂದು ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆಂದು ನುಡಿದಿರುತ್ತಾರೆ. ನನ್ನ ಹೆಸರು ರಂಗಪ್ಪ ಎಂದು ಹೇಳಲು ದಾಖಲಾತಿ ಇದ್ದು, ಅದನ್ನು ನ್ಯಾಯಾಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ದಾವೆಯಲ್ಲಿ ಸಲ್ಲಿಸಿರುವ ತಕರಾರಿನ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿ ಹಾಕಿಸಿರುತ್ತೇನೆ. ನಿಮ್ಮ ಪ್ರಮಾಣ ಪತ್ರದಲ್ಲಿ ನಿಮ್ಮ ವಯಸ್ಸನ್ನು ನಮೂದು ಮಾಡಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಮೂದು ಮಾಡಿಸಿರುತ್ತೇವೆ ಎಂದು ನುಡಿದಿರುತ್ತಾರೆ.

ದಿಃ 03-08-1998 ರಲ್ಲಿ ನಡೆದ ಕ್ರಯಪತ್ರದ ನೋಂದಣಿ ಸಮಯದಲ್ಲಿ ನೀವು ಹಾಜರಿದ್ದು, ಸದರಿ ದಾಖಲಾತಿಗೆ ಸಾಕ್ಷಿ ಸಹಿ ಹಾಕಿರುತ್ತಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಸಾವಿತ್ರಮ್ಮನವರು ಮಾಡಿಕೊಟ್ಟ ಕ್ರಯಪತ್ರದಂತೆ ವಾದಿಗೆ ಖಾತೆ ಸಹ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ಅಸಸ್ ಮೆಂಟ್ ನಂ.137 ರ ಖಾತೆ ಎಂದು ನುಡಿದಿರುತ್ತಾರೆ. ಖಾತೆ

ಬದಲಾವಣೆ ಆದ ಬಗ್ಗೆ ನೀವು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಚಕ್ಕುಬಂದಿ ಸ್ವಲ್ಪ ತಪ್ಪಾಗಿರುವ ಕಾರಣ ಅದರ ಮೇಲೆ ಅಕ್ರಮ ಲಾಭ ಪಡೆಯಲು ಸುಳ್ಳು ತಕರಾರನ್ನು ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ಸಾವಿತ್ರಮ್ಮನವರ ಮಾಲೀಕತ್ವದ ಮೇಲೆ ನೀವು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿ ಅಸಸ್ ಮೆಂಟ್ ನಂ. 138 ರಲ್ಲಿ ನಾವು ಸ್ವಾಧೀನದಲ್ಲಿದ್ದು, ನಮಗೆ ಯಾವುದೇ ತೊಂದರೆ ಮಾಡದೇ ಇದ್ದ ಕಾರಣ ನಾವು ತಕರಾರು ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು 3 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದು, ಕಾನೂನಿನ ಬಗ್ಗೆ ಸ್ವಲ್ಪ ಅರಿವು ಇರುತ್ತದೆ. ಒ ಎಸ್ 74/2014 ದಾವೆಯಲ್ಲಿ ವಾದಿಯು ನಿಮ್ಮ ವಿರುದ್ಧ ದಾವೆ ಹೂಡಿದ್ದು, ಸದರಿ ದಾವೆಯು ಡಿಕ್ರಿ ಆಗಿರುತ್ತದೆ ಎಂದರೆ ಸಾಕ್ಷಿ ಅಸಸ್ ಮೆಂಟ್ ನಂ.137 ರಲ್ಲಿ ಪಡೆದುಕೊಂಡಿರುತ್ತಾರೆ, ನಾವು ಅಸಸ್ ಮೆಂಟ್ ನಂ.138 ರಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿದಿರುತ್ತಾರೆ.

ಒ ಎಸ್ 74/2014 ರ ಡಿಕ್ರಿಯಾದ ದಾವೆ ಮೇಲೆ ಯಾವುದೇ ಅಪೀಲನ್ನು ನೀವು ಹೂಡಿರುವುದಿಲ್ಲ ಎಂದರೆ ಸರಿ. ನೀವು ವಾದಿಯವರಿಗೆ ನಿಮಗೆ ಪಂಚಾಯಿತಿಯಿಂದ ಬೇರೆ ಕಡೆ ನಿವೇಶನ ನೀಡುತ್ತಾರೆ ಅಲ್ಲಿಯವರೆಗೂ ವಾದಿಯ ಅಸಸ್ ಮೆಂಟ್ ನಂ.137 ರಲ್ಲಿ ಗುಡಿಸಲು ಕಟ್ಟಿಕೊಂಡು ಇರುತ್ತೇನೆಂದು ಕೇಳಿದ್ದಕ್ಕೆ ವಾದಿಯು ನಿಮಗೆ ಅಸಸ್ ಮೆಂಟ್ ನಂ.137 ರಲ್ಲಿ ಇರಲು ಬಿಟ್ಟಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ತಂದೆ ಅಸಸ್ ಮೆಂಟ್ ನಂ.138 ರಲ್ಲಿ ಹಿಂದಿನಿಂದಲೂ ವಾಸವಿದ್ದೆವು. ಅಸಸ್ ಮೆಂಟ್ ನಂ.138 ರಲ್ಲಿ ಇದ್ದ ಬಗ್ಗೆ ನಾನು ದಾಖಲಾತಿಯನ್ನು ಹಾಜರುಪಡಿಸುತ್ತೇನೆ. ಅಸಸ್ ಮೆಂಟ್ ಹಾಗೂ ಮಂಜೂರಿ ಪತ್ರ ಇರುತ್ತದೆ ಎಂದರೆ ಸರಿ. ದಾವ ಸ್ವತ್ತಿನ ಆಸ್ತಿಗಳ ಬಗ್ಗೆ ಪಂಚಾಯಿತಿಗೆ ಹೋಗಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

ಅಸಸ್ಮೆಂಟ್ ನಂ.135 ಪಂಚಾಯಿತಿಯವರು ಮಾಲು ಕೋಂ ಕೋಯ ರವರಿಗೆ 1990 ನೇ ಸಾಲಿನಲ್ಲಿ ಮಂಜೂರಿ ಮಾಡಿರುತ್ತಾರೆಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿದಿರುತ್ತಾರೆ. ಪ್ರಸ್ತುತ ಅಸಸ್ ಮೆಂಟ್ ನಂ.135 ರಲ್ಲಿ ಮಂಜೋಜಿ ರಾವ್ ಇರುತ್ತಾರೆಂದರೆ ಸಾಕ್ಷಿ ಇರುತ್ತಾರೆ ಆದರೆ 135 ರಲ್ಲಿ ಅಥವಾ 136 ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಸಾವಿತ್ರಮ್ಮನವರಿಗೆ ಅಸಸ್ ಮೆಂಟ್ 137 ರಲ್ಲಿ ನಿವೇಶನವನ್ನು ಪಂಚಾಯಿತಿಯವರು ಮಂಜೂರಿ ಮಾಡಿರುತ್ತಾರೆಂದರೆ ಸರಿ. ಅದೇ ನಿವೇಶನವನ್ನು ಸಾವಿತ್ರಮ್ಮನವರು ಕೋಯರವರಿಗೆ 1998 ರಲ್ಲಿ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆಂದರೆ ಸರಿ. ವಾದಿಗೆ ಸೇರಿದ ಸ್ವತ್ತಿನ ಪಶ್ಚಿಮಕ್ಕೆ ನಿಮ್ಮ ಸ್ವತ್ತು ಇದೆ ಎಂದು ತಿಳಿಸಿರುತ್ತಿರಾ ಅದು ಹೇಗೆ ಬಂತು ಎಂದರೆ ಸಾಕ್ಷಿ ಪಂಚಾಯಿತಿಯಿಂದ ಮಂಜೂರಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಮಂಜೂರಿ ಆದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**